ಯೋಜನೆ ಇದ್ದೇ ಇದೆ. ಈ ಯೋಜನೆಯನ್ನು ಪ್ರತಿ ಕ್ಷೇತ್ರಕ್ಕೂ ವಿಸ್ತರಿಸಿದ್ದೇವೆ. ಉಳಿದಿರತಕ್ಕಂಥಾದ್ದು ಎಂದರೆ, 1991-92ರ ಆಯವ್ಯಯ ಬರುವ ಏಪ್ರಿಲ್ ತಿಂಗಳಿನಿಂದ ಏನು ಪ್ರಾರಂಭವಾಗುತ್ತದೆ, ಅದರಲ್ಲಿ ಕೆಲವು ಕಾಮಗಾರಿಗಳನ್ನು ಸೇರಿಸಿ ಕೊಡತಕ್ಕಂಥ ಪ್ರಯತ್ನ ಮಾಡುತ್ತೇನೆ.

ಶ್ರೀ ಅಂಜನಮೂರ್ತಿ : ಮಾನ್ಯ ಸಭಾಧ್ಯಕ್ಷರೇ, 1990-91ನೇ ಸಾಲಿನಲ್ಲಿ ರೂ ಕೆಲಸಕ್ಕಾಗಿ ಸುಮಾರು 75 ಲಕ್ಷ ರೂಪಾಯಿ ಒದಗಿಸಿದ್ದರೂ, ಬರೀ 3 ಲಕ್ಷ ರೂಪಾಯಿ ಮಾತ್ರ ಖರ್ಚು ಮಾಡಿದ್ದರು. ಸ್ಪಿಲ್ ಓವರ್‌ನ್ನೂ ಕೂಡ ತೆಗೆದುಕೊಂಡಿಲ್ಲ. ಈ ಸಾಲಿನಲ್ಲಿ ಅಂದರೆ 1991-92ರ ಆಯವ್ಯಯದಲ್ಲಿ ಹಣ ಒದಗಿಸಬೇಕೆಂದು ತಮ್ಮ ಮೂಲಕ ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ಒದಗಿಸುವ ಪ್ರಯತ್ನ ಮಾಡುತ್ತೇನೆ.

ಸರ್ಕಾರಿ ಕಟ್ಟಡಗಳ ನಿರ್ವಹಣೆ

30 - ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಾಜಿನಗರ ಕ್ಷೇತ್ರದಲ್ಲಿ ಸರ್ಕಾರಿ ಕಟ್ಟಡಗಳು ಅಂದರೆ ಸರ್ಕಾರೀ ಕಾರ್ಯಾಲಯ ಕಟ್ಟಡಗಳು, ಪೋಲೀಸ್ ಠಾಣೆ ಕಟ್ಟಡಗಳು, ರಾಮನಾರಾಯಣ ಚೆಲ್ಲಾರಾಂ ಕಾಲೇಜ್ ಕಟ್ಟಡ, ಶಾಲಾ ಕಟ್ಟಡಗಳು, ಕಾರಲ್‌ಟನ್ ಹೌಸ್, ಕುಮಾರ ಕೃಪ, ಪೋಲೀಸರು ವಾಸದ ಮನೆಗಳನ್ನು ಮುಂತಾದವುಗಳು ಹಳೆಯದಾಗಿದ್ದು, ಶಿಥಿಲಾವಸ್ಥೆಯಲ್ಲಿದ್ದು ಸೂಕ್ತ ದುರಸ್ತಿ ಮತ್ತು ನಿರ್ವಹಣೆಯ ಕೊರತೆಯಿಂದಾಗಿ ನಿವಾಸಿಗಳಿಗೆ ಸಹಿಸಲಾ ಸಾಧ್ಯವಾದ ತೊಂದರೆಯಾಗುತ್ತಿರುವುದು ಸರ್ಕಾರಕ್ಕೆ ಅರಿವಿದೆಯೇ?

ಆ) ಈ ಕಟ್ಟಡಗಳಿಗೆ ನೀರು ಸರಬರಾಜು, ಶೌಚ ವ್ಯವಸ್ಥೆ, ದೀಪ ವ್ಯವಸ್ಥೆ ಮತ್ತು ಸೂಕ್ತ ನಿರ್ವಹಣೆ ಇವುಗಳನ್ನು ಏರ್ಪಡಿಸುವುದರ ಮೂಲಕ ತಕ್ಷಣ ಪರಿಹಾರ ಒದಗಿಸುವುದಾಗಿ ಸನ್ಮಾನ್ಯ ಲೋಕೋಪಯೋಗಿ ಸಚಿವರು ಈ ಕ್ಷೇತ್ರದ ಪರಿವೀಕ್ಷಣಾ ಸಮಯದಲ್ಲಿ ನೀಡಲಾದ ಸ್ಥಳಾಶ್ವಾಸನೆ ಹಾಗೂ ಸದನದಲ್ಲಿ ಈ ಬಗ್ಗೆ ನೀಡಲಾದ ಆಶ್ವಾಸನೆ ಇವುಗಳನ್ನು ಸರ್ಕಾರ ನೆನಪು ಮಾಡಿಕೊಳ್ಳುವುದೇ?

ಇ) ಸನ್ಮಾನ್ಯ ಸಚಿವರು ಪರಿವೀಕ್ಷಣೆ ನಡೆಸಿದ ನಂತರವೂ ಪರಿಹಾರ ಒದಗಿಸಲು ಏನೂ ಕ್ರಮ ತೆಗೆದುಕೊಳ್ಳದಿರುವುದು ನಿಜವಲ್ಲವೇ?

ಈ) ಆಶ್ವಾಸನೆಯನ್ನು ಕಾರ್ಯಗತ ಮಾಡುವಲ್ಲಿನ ಸರ್ಕಾರದ ವಿಫಲತೆಗೆ ಕಾರಣಗಳೇನು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಕೆಲವು ಕಟ್ಟಡಗಳಿಗೆ ದುರಸ್ತಿ ಹಾಗೂ ವಿಶೇಷ ದುರಸ್ತಿ ಅವಶ್ಯಕತೆ ಇದೆ.

ಆ) ಹೌದು.

ಇ) ಈಗಾಗಲೇ ಎರಡು ಕಟ್ಟಡಗಳ ದುರಸ್ತಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ ಹಾಗೂ ಉಳಿದ ಕಟ್ಟಡಗಳ ಕೆಲಸವನ್ನು ಅನುದಾನದ ಲಭ್ಯತೆಯನ್ನು ಆಧರಿಸಿ ತೆಗೆದುಕೊಳ್ಳಲಾಗುವುದು.

ಈ) ಆಶ್ವಾಸನೆಯನ್ನು ಹಣದ ಲಭ್ಯತೆಯನ್ನಾಧರಿಸಿ ಕಾರ್ಯಗತಗೊಳಿಸಲಾಗುವುದು.

ಶ್ರೀ ಎ.ಕೆ. ಅನಂತಕೃಷ್ಣ : ಮಾನ್ಯ ಅಧ್ಯಕ್ಷರೆ, ಹಿಂದಿನ ಸಭೆಯಲ್ಲಿ ಈ ಪ್ರಶ್ನೆ ಕೇಳಿ ಬಹಳ ಒತ್ತಾಯ ಮಾಡಿದ ಮೇಲೆ ತಾವು ನನ್ನ ರಕ್ಷಣೆಗೆ ಬಂದಿರಿ.

ಆಗಿನ ಲೋಕೋಪಯೋಗಿ ಮಂತ್ರಿಗಳಿಗೆ ತಾವು ಆದೇಶ ಕೊಟ್ಟಿದ್ದೀರಿ. ಅವರು ಹೇಳಿದ್ದರು, ಸದನ ಮುಗಿದ ತಕ್ಷಣ ಸ್ಥಳ ಪರೀಕ್ಷೆ ನಡೆಸಿ ಏನು ಪರಿಹಾರ ಕೊಡಬೇಕು ಅದನ್ನು ಖಂಡಿತ ಕೊಡುತ್ತೇನೆಂದು ಹೇಳಿ, ಅದೇ ಪ್ರಕಾರ ಸ್ಥಳ ಪರೀಕ್ಷೆ ಮಾಡಿದರು. ಆಗ ನನಗೆ ಏನು ಉತ್ತರ ಬಂದು, ಅದಕ್ಕಿಂತ ಕಡಿಮೆ ಉತ್ತರ ಈಗ ಬಂದಿದೆ. ಉತ್ತರ ಸಮಂಜಸವಾಗಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ. ಏಕೆಂದರೆ, ಉತ್ತರದಲ್ಲಿ ಅವರು ಏನು ಹೇಳುತ್ತಾರೆಂದರೆ, some buildings require repairs and improvements, it is not some buildings, all the buildings worth hundreds of crores of rupees. ಮತ್ತೆ ಇದು ತಮ್ಮ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ ಹೇಳಿದ್ದಾರೆ. Repairs of two buildings has already been taken up ಎಂದು ಬಂದಿದೆ ಎಂದು ಹೇಳಿದ್ದಾರೆ. ನಂತರ ಯಾವುದು ಎರಡು ಕಟ್ಟಡಗಳು ಎಂದು ಹೇಳಿಲ್ಲ. ನಾನು ಸ್ಪೆಸಿಫೈ ಮಾಡಿದ್ದೇನೆ.

ನಾನು ಯಾವ್ಯಾವ ಕಟ್ಟಡ ಯಾವ ತರಹ ಇದೆಯೆಂದು ನಾನು ಈಗಾಗಲೇ ಸ್ಪೆಸಿಫಿಕ್ಕಾಗಿ ತಿಳಿಸಿದ್ದೇನೆ. ಇದರಲ್ಲಿ ಬಹಳ ಮುಖ್ಯವಾದ ವಿಷಯವೆಂದರೆ ನಮ್ಮ ಸರ್ಕಾರದಲ್ಲಿ ಕೆಲಸ ಮಾಡುತ್ತಿರತಕ್ಕಂಥವರು, ಅದರಲ್ಲೂ ಬಹಳ ಕಡಿಮೆ ದರ್ಜೆಯಲ್ಲಿ ಕೆಲಸ ಮಾಡುತ್ತಿರುವವರು ವಾಸಿಸುತ್ತಿದ್ದಾರೆ. ಅವರಿಗೆ ಸರಿಯಾದ ಮನೆಗಳಿಲ್ಲ, ಛಾವಣಿ ಕುಸಿದು ಹೋಗುವ ಸ್ಥಿತಿಯಲ್ಲಿದೆ. ಬಾಗಿಲುಗಳು ಸರಿಯಾಗಿಲ್ಲ ವಿದ್ಯುತ್, ನೀರು, ಒಳಚರಂಡಿ, ಹೊರಗಡೆ ಚರಂಡಿ ವ್ಯವಸ್ಥೆ ಯಾವುದೂ ಇರುವುದಿಲ್ಲ ಮತ್ತು ಕ್ವಾರ್ಟ್ರ್ಸ್‌ಗೆ ಹೊಗಬೇಕಾದರೆ ಸರಿಯಾದ ರಸ್ತೆ ಸೌಕರ್ಯವಿಲ್ಲ. ಇಂಥಹ ಪರಿಸ್ಥಿತಿ ಇದೆಯೆಂದು ಮೇಲೆ ಸಂಬಂಧಪ್ಪ ಇಂಜಿನಿಯರ್‌ಗಳು ಮುಖ್ಯಮಂತ್ರಿಗಳಿಗೆ ಯಾವ ರೀತಿಯಲ್ಲಿ ಮಾಹಿತಿ ಕೊಟ್ಟು ಅವರು ಇಲ್ಲಿ ಉತ್ತರ ಕೊಡ ಬೇಕೋ ಆರೀತಿ ಉತ್ತರ ಕೊಡುವುದಕ್ಕೆ ಅನುಕೂಲ ಮಾಡಿಲ್ಲವೆಂದು ನಾನು ಆರೋಪ ಮಾಡುತ್ತೇನೆ. ಅದಕ್ಕೆ ಮುಖ್ಯಮಂತ್ರಿಗಳು ಏನು ಹೇಳುತ್ತಾರೆ? ಸಿ.ಒ.ಡಿ. ಕ್ವಾಟರ್ಸ್ ಕಾಂಪೌಂಡ್ ಒಳಗಡೆ ಇದೆ. ಯಾರಾದರೂ ಎಮರ್ಜನ್ಸಿ ಸ್ಥಿತಿಯಲ್ಲಿ, ಹೆಣ್ಣುಮಕ್ಕಳೋ, ಮುದುಕರೋ ಅಥವಾ ಕಾಯಿಲೆಯಾದವರು ಹೋಗಬೇಕಾದರೆ ಆಟೋರಿಕ್ಷಾ ಒಳಗಡೆ ಹೋಗುವುದಕ್ಕೆ ಬಿಡುವುದಿಲ್ಲವೆಂದು ಹೇಳುತ್ತಾರೆ. ಅಲ್ಲದೆ ಅಲ್ಲಿ ರಾತ್ರಿ ಲೈಟ್ ಕೂಡಾ ಇಲ್ಲ. ಹಾವು, ಚೇಳುಗಳು ಇರುವುದರಿಂದ ನಡೆದುಕೊಂಡು ಹೋಗಲು ಕಷ್ಟವಾಗುತ್ತಿದೆ. ಇವೆಲ್ಲವನ್ನು ತಮ್ಮ ಗಮನಕ್ಕೆ ತರುತ್ತಿದೇನೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೇ, 17.9.90 ರಂದು ಮಾನ್ಯ ಲೋಕೋಪಯೋಗಿ ಸಚಿವರು ಇವೆಲ್ಲದರ ಪರಿವೀಕ್ಷಣೆ ನಡೆಸಿರುವುದು ನಿಜ. ಇದಾವ ನಂತರ ಶಿವಾಜಿನಗರ ಬ್ಲಾಕ್‌ನಲ್ಲಿರುವ ಆರಕ್ಷರ ವಸತಿ ಗೃಹಗಳು, ಎಚ್.ಎಸ್.ಐ.ಆಸ್ಪತ್ರೆ ಅಭಿವೃದ್ಧಿ ಕೆಲಸ, ಬೋರಿಂಗ್ ಅಂಡ್ ಲೇಡಿ ಸರ್ಜನ್ ಆಸ್ಪತ್ರೆ ಅಭಿವೃದ್ಧಿ, ಕಮರ್ಷಿಯಲ್ ರಸ್ತೆ ಪೋಲೀಸ್ ಸ್ಟೇಷನ್‌ಗೆ ನೀರು ನೈರ್ಮಲೀಕರಣ, ಕರ್ಲ್‌ಟನ್ ಹೌಸ್ ಅಭಿವೃದ್ಧಿ ಇತ್ಯಾದಿ ಕೆಲಸಗಳಿಗೆ ಒಟ್ಟು 36 ಲಕ್ಷ ರೂಪಾಯಿಗಳ ಹೆಚ್ಚುವರಿ ಅನುದಾನ ಬೇಕಾಗುತ್ತದೆಂದು ಆಗಿನ ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದ್ದರು. ಇದರಲ್ಲಿ ಪೋಲೀಸ್ ವಸತಿಗೃಹಕ್ಕೆ ಅಂದರೆ, ಶಿವಾಜಿನಗರ ಬ್ಲಾಕ್‌ನಲ್ಲಿರುವ ಪೋಲೀಸ್ ವಸತಿ ಗೃಹಕ್ಕೆ ಒಂದು ಲಕ್ಷದ ಮೂರು ಸಾವಿರ ರೂಪಾಯಿಗಳ ಅಂದಾಜು ಈಗಾಗಲೆ ಮಂಜೂರಾಗಿದೆ. ಕೆಲಸ ಮಾಡಿಸಲು ಗುತ್ತಿಗೆದಾರರುನ್ನು ನೇಮಿಸಿದೆ ಮತ್ತು ಕೆಲಸವು ಪ್ರಗತಿಯಲ್ಲಿದೆ. ರಾಮನಾರಾಯಣ ಚೆಲ್ಲಾರಾಂ ವಾಣಿಜ್ಯ ಕಾಲೇಜಿನ ರಿಪೇರಿ ಕಾಮಗಾರಿಗಳನ್ನು ತೆಗೆದುಕೊಂಡು ಪೂರ್ಣಗೊಳ್ಳುವ ಹಂತದಲ್ಲಿದೆ. ಉಳಿದಿರತಕ್ಕಂಥ ಕೆಲಸಗಳು ಹಣದ ಕೊರತೆಯಿಂದ ಪ್ರಾರಂಭವಾಗಿಲ್ಲ ಎನ್ನತಕ್ಕ ವಿಷಯವನ್ನು ಮಾನ್ಯ ಸದಸ್ಯರು ಏನು ಹೇಳುತ್ತಾರೆ ಅದನ್ನು ಒಪ್ಪಿಕೊಳ್ಳುತ್ತೇನೆ. ಹಣ ಸರ್ಕಾರ ಬಿಡುಗಡೆ

ಮಾಡಿಕೊಡತಕ್ಕ ಕೆಲಸವನ್ನು ಮಾಡುತ್ತದೆ. ಎಷ್ಟು ಹಣ? ಎಂದು ನಾನು ಹೇಳಲಾರೆ. ದಯಮಾಡಿ, ಮಾನ್ಯ ಸಭಾಧ್ಯಕ್ಷರು ಇದರಲ್ಲಿ ತುರ್ತಾಗಿ ಆಗಬೇಕಾಗಿರುವಂಥ ಕೆಲಸಗಳು ಯಾವುವು ಎಂದು ನೀವೇ ಸ್ವಲ್ಪ ವಿಚಾರ ಮಾಡಿ ಹೇಳಿಬಿಟ್ಟರೆ ಬಹಳ ಅನುಕೂಲವಾಗುತ್ತದೆ. ಉಳಿದಿರುವ ಕೆಲಸಗಳನ್ನು ಸ್ವಲ್ಪ ನಿಧಾನವಾಗಿ ತೆಗೆದುಕೊಳ್ಳೋಣ. ನಾನು ಹಣಕಾಸಿನ ಪರಿಸ್ಥಿತಿ ದೃಷ್ಟಿಯಿಂದ ಹೇಳುತ್ತಿದ್ದೇನೆ.

ಶ್ರೀ ಎ.ಕೆ. ಅನಂತಕೃಷ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳಿಗೆ ನನ್ನ ಕೃತಜ್ಞತೆಗಳು. ಈ ವಿಷಯದಲ್ಲಿ ಬಹಳ ಮುಖ್ಯವಾಗಿರತಕ್ಕಂಥದ್ದು ಎಂದರೆ, ಈ ಕ್ವಾರ್ಟರ್ಸ್ ಎಂದು ನಾವು ಏನು ಹೇಳುತ್ತೇವೆ ಇವು ಸರ್ಕಾರಿ ಕಾಂಪೌಂಡ್‌ನಲ್ಲಿರತಕ್ಕ ಸಣ್ಣ ಸಣ್ಣ ಕ್ವಾಟರ್ಸ್. ಸಿ.ಒ.ಡಿ. ಕ್ವಾಟರ್ಸ್‌ನ ಒಳಗಡೆ ಇರತಕ್ಕಂಥ ಕ್ವಾರ್ಟರ್ಸ್ ಪಾಳು ಬಿದ್ದು ಹೋಗುತ್ತಿವೆ. ಹಾಗೆಯೇ ಕ್ರೆಸೆಂಟ್ ರಸ್ತೆಯಲ್ಲಿರುವ ಕ್ವಾರ್ಟರ್ಸ್. ಈ ತರಹ ಕುಮಾರ ಕೃಪ ಕಾಂಪೌಂಡ್‌ನಲ್ಲಿತಕ್ಕಂಥ ಕ್ವಾರ್ಟರ್ಸ್ ಇದೆ. ಇವುಗಳ ಮೇನ್ ಬಿಲ್ಡಿಂಗ್ ಎಲ್ಲಾ ಚೆನ್ನಾಗಿ ಇಟ್ಟುಕೊಂಡಿದ್ದಾರೆ. ಒಳಗಡೆ ಇರುವ ಕ್ವಾರ್ಟರ್ಸ್‌ಬಹಳ ಕೆಟ್ಟ ಪರಿಸ್ಥಿತಿಯಲ್ಲಿದೆ. ಅಲ್ಲಿ ಕುಡಿಯಲಿಕ್ಕೆ ನೀರು ಇಲ್ಲ ಅಂಡರ್‌ಗ್ರೌಂಡ್ ಕನೆಕ್ಷನ್ ಇಲ್ಲ. ಡ್ರೈನೇಜ್ ಇಲ್ಲ. ಓಡಾಡಲಿಕ್ಕೆ ಅನುಕೂಲ ಇಲ್ಲ. ಈ ವಿಷಯವನ್ನು ಬಹಳ ಮುಖ್ಯವಾಗಿ ಹೇಳುತ್ತಿದ್ದೇನೆ. ಇದನ್ನು ಕಾರ್ಪೊರೇಷನ್‌ನವರು ಮಾಡಲಿಕ್ಕೆ ಸಾಧ್ಯವಿಲ್ಲ. ಅವರು ನಗರಸಭೆಯ ಸದಸ್ಯರಿಗೆ ನಾವು ಓಟು ಕೊಟ್ಟಿದ್ದೇವೆ ನೀವು ಏನೂ ಮಾಡಿಲ್ಲ ಎಂದು ಹೇಳುತ್ತಾರೆ. ಅಸೆಂಬ್ಲಿ ಸದಸ್ಯರಾದ ತಮಗೆ ನಾವು ಓಟು ಕೊಟ್ಟಿದ್ದೇವೆ. ನೀವು ಓಟು ಕೊಟ್ಟಿದ್ದೇವೆ. ನೀವೂ ಏನೂ ಮಾಡಿಸಿಲ್ಲ ಎಂದು ಹೇಳುತ್ತಿದ್ದಾರೆ. ಅಲ್ಲಿ ವಾಸ ಮಾಡುವವರೆಲ್ಲಾ ವಿಧಾನ ಸೌಧದ ಸುತ್ತಮುತ್ತ ಕೆಲಸ ಮಾಡುತ್ತಿದ್ದಾರೆ. ನಾವು ಓಡಾಡುವಾಗ ನಮ್ಮ ಹತ್ತಿರ ಕೇಳುತ್ತಿದ್ದಾರೆ. ಈಗ ಮಾನ್ಯ ಮುಖ್ಯಮಂತ್ರಿಗಳು ಬಡ್ಜೆಟ್ ಪ್ರಾವಿಜನ್ ಮಾಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದಾರೆ. ಆದರೆ ಒಂದು ವಿಷಯ. ನಾನು ಮುಖ್ಯ ಇಂಜಿನಿಯರ್‌ರವರನ್ನು ಕೇಳಿದಾಗ ಬಡ್ಜೆಟ್‌ನಲ್ಲಿ ಪ್ರಾವಿಜನ್ ಇಲ್ಲ ಎಂದು ನಾಲ್ಕೈದು ವರ್ಷಗಳಿಂದ ಕೆಲಸ ಮಾಡಿಲ್ಲ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಈ ವರ್ಷ ಬಡ್ಜೆಟ್ ಪ್ರಾವಿಜನ್ ಮಾಡಿದರೆ ಸಾಕು.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸದಸ್ಯರು ಕಾರ್ಲ್‌ಟನ್ ಹೌಸ್ ಹತ್ತಿರ ಇರುವ ನೌಕರರ ಕ್ವಾರ್ಟರ್ಸ್ ತೊಂದರೆ ಬಗ್ಗೆ ಹೇಳುತ್ತಿದ್ದಾರೆ. ಅದರ ಬಗ್ಗೆ ನಾವು ಕ್ರಮ ತಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ಮಾನ್ಯ ಸದಸ್ಯರು ಪ್ರಿಯಾರಿಟೀಸ್ ಯಾವುದು ಎಂದು ಬರೆದು ಕಳುಹಿಸಿಕೊಡಿ.

ಶ್ರೀ ಸಿ. ಬೈರೇಗೌಡ : ಸ್ವಾಮಿ, ಇದರಲ್ಲಿ ಅಸಮರ್ಪಕ ಬಳಕೆಯಿಂದಾಗಿ ನಷ್ಟ ಅನುಭವಿಸಿಲ್ಲ ಎನ್ನತಕ್ಕಂಥ ಮಾತನ್ನು ತಮ್ಮ ಉತ್ತರದಲ್ಲಿ ಹೇಳುತ್ತಿದ್ದೀರಿ. ಕಲ್ಲಿದ್ದಲು ಬಳಕೆ ಆಗತಕ್ಕದ್ದು ಒಂದು ಚೈನ್ ಮೂಲಕ ಬಾಯ್ಲರ್‌ಗೆ ಇದನ್ನು ಫೀಡ್ ಮಾಡುತ್ತಾರೆ. ಆ ಚೈನಿನ ಸ್ಪೀಡನ್ನು ಅಡ್ಜೆಸ್ಟ್ ಮಾಡುವುದರಿಂದ ಫೀಡ್ ಮಾಡತಕ್ಕಂಥ ಸ್ಪೀಡನ್ನು ಅಡ್ಜಸ್ಟ್ ಮಾಡುವುದರಿಂದ ಉರಿಯಬೇಕಾಗಿರತಕ್ಕಂಥ ಕಲ್ಲಿದ್ದಲು ಸಹ ಕೆಳಗಡೆ ಹೋಗಿ ನೀರಿನಲ್ಲಿ ಬೀಳುತ್ತದೆ. ಇದರಿಂದ ಏನಾಗಿದೆ ಅಂದರೆ ಹಿಂದೆ ಈ ಸಿಂಡರ್ಸನ್ನು ಹರಾಜು ಮಾಡುತ್ತಾ ಇರಲಿಲ್ಲ. ಹೋದವರ್ಷ ಮತ್ತು ಅದಕ್ಕೆ ಹಿಂದಿನ ಸುಮಾರು ಒಂದೂವರೆ ಕೋಟಿ ರೂಪಾಯಿಗಳಷ್ಟು ಸಿಂಡರ್ಸ್ ಹರಾಜು ಆಗಿದೆ. ಈ ರೀತಿ ಹರಾಜು ಆಗುತ್ತಿರುವುದನ್ನು ನೋಡಿದರೆ ಕಲ್ಲಿದ್ದಲಿನ ದುರ್ಬಳಕೆ ಅಲ್ಲಿ ಆಗುತ್ತಿದೆ ಎನ್ನತಕ್ಕದ್ದನ್ನು ಸಾಬೀತು ಮಾಡುವುದಿಲ್ಲವೆ?

ಶ್ರೀ ಎಸ್. ಬಂಗಾರಪ್ಪ : ಲಾಸ್ ಆಗಿದೆ ಎಂಬುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಲಾಸ್ ಆಗುವುದಕ್ಕೆ ಕಾರಣ, ಟ್ರಾನ್ಸಿಪ್‌ಮೆಂಟ್ ಮತ್ತು ಟ್ರಾನ್ಸಿಟ್‌ಗಳು. ಆದರೆ ಇದರಲ್ಲಿ ಇನ್-ಎಫಿಷಿಯನ್ಸಿ ಮತ್ತೊಂದು ಎನ್ನತಕ್ಕ ಪ್ರಶ್ನೆಯಲ್ಲ. because all the things are stored in open yard.

ಅದು ಪೌಡರ್ ಟೈಪ್ ಮತ್ತೊಂದು ಇರುವುದರಿಂದ on account of the gush of cinders something like that is also one of the reasons. ಟ್ರಾನ್ಸ್‌ಪೋರ್ಟ್ ಆಫ್ ಕೋಲ್ ಬೈ ರೋಡ್ ಮಾಡುವುದಕ್ಕೆ ಟೆಂಡರ್ಸ್ ವಗೈರೆ ಕರೆದಿದ್ದರು ಎಂದು ಹೇಳಿದ್ದಾರೆ. ಹೌದು, ಟೆಂಡರ್‌ನ್ನು ಕರೆದಿದ್ದಾರೆ ಸುಮಾರು 15 ಟೆಂಡರ್‌ಗಳು ಬಂದಿದ್ದುವು ಎನ್ನತಕ್ಕ ಮಾತನ್ನು ನಾನು ತಿಳಿಸಿದ್ದೇನೆ. ಇದರಲ್ಲಿ ಬೇರೆ ರೀತಿಯ ಲಾಸ್ ಆದರೆ ಅದು ಇನ್-ಎಫಿಷಿಯನ್ಸಿಯಿಂದ ಆಯಿತು ಎನ್ನತಕ್ಕ ಪ್ರಶ್ನೆ ಬರುವುದಿಲ್ಲ. ಅಲ್ಲಿ ನ್ಯಾಚುರಲ್ ಆಗಿ ಕೆಲವು ಕಾರಣಗಳು ನಡೆದಿದೆ ಎನ್ನತಕ್ಕ ವರದಿ ನನ್ನ ಮುಂದಿದೆ.

ಶ್ರೀ ಸಿ. ಬೈರೇಗೌಡ : ಸ್ವಮಿ, ಟೆಂಡರ್ ವಿವರಗಳನ್ನು ಕೊಡಿ ಎಂದು ನಾನು ಕೇಳಿದ್ದೆ. ಆ ವಿವರಗಳನ್ನು ಕೊಟ್ಟಿಲ್ಲ.

ಶ್ರೀ ಎಸ್. ಬಂಗಾರಪ್ಪ : ಕೊಡುತ್ತೇನೆ. ಅದು ನಿಮಗೆ ಬೇಕೆ?

ಶ್ರೀ ಸಿ. ಬೈರೇಗೌಡ : ಬಂದಂಥ ಟೆಂಡರ್‌ಗಳು ಎಷ್ಟು? ವಿವರಗಳನ್ನು ನೀಡುವುದು ಎಂದು ನಾನು ಪ್ರಶ್ನೆಯನ್ನು ಕೇಳಿದ್ದೆ. ಸಾಗಣಿಕೆಗಾಗಿ 15 ಪಾರ್ಟ್‌ಗಳು ಟೆಂಡರ್‌ಗಳನ್ನು ಕಳಿಸುತ್ತಾರೆ ಎಂದು ಇದೆ ಅಷ್ಟೆ, ಆದರೆ ವಿವರಗಳಿಲ್ಲ. ನಾನು ಏತಕ್ಕೆ ಈ ಪ್ರಶ್ನೆ ಕೇಳಿದೇನೆಂದರೆ, ಅವರಿಗೆ ಖುಷಿ ಬಂದಂತೆ ಟೆಂಡರ್‌ಗಳನ್ನು ಅಪ್ರೂವ್ ಮಾಡಿದ್ದಾರೆ. ಆದುದರಿಂದಲೇ ನಾನು ವಿವರಗಳನ್ನು ಕೇಳಿರತಕ್ಕದ್ದು. ಕಲ್ಲಿದ್ದಲು ಬಗ್ಗೆ ಅಸಮರ್ಪಕ ಬಳಕೆಯಿಂದ ನಷ್ಟ ಅನುಭವಿಸಿಲ್ಲ ಎಂದು ತಾವು ಹೇಳಿದ್ದೀರಿ. ಅಲ್ಲಿ ಒಂದು ಚೈನ್ ಇದೆ. ಅದರ ಮೇಲೆ ಫೀಡ್ ಮಾಡುತ್ತಾರೆ. ಸ್ಪೀಡನ್ನು ಹೆಚ್ಚಿಗೆ ಮಾಡಿದರೆ ಸುಟ್ಟು ಶಾಖವನ್ನು ಕೊಡಬೇಕಾದ ಕಲ್ಲಿದ್ದಲು ಅರ್ಧ ಸುಟ್ಟು ಮುಂದೆ ಹೋಗಿ ನೀರಿನಲ್ಲಿ ಬೀಳುತ್ತದೆ. ಈ ವರ್ಷ ಬೂದಿಯನ್ನು ಹರಾಜು ಹಾಕಿರತಕ್ಕದ್ದು ಸುಮಾರು 1.5 ಕೋಟಿ ರೂಪಾಯಿಗೆ ಹೋಗಿದೆ. ಆ ಸಿಂಡರಿನ ಕಂಟ್ರಾಕ್ಟ್‌ದಾರರು ಮತ್ತು ಅಲ್ಲಿನ ಸಿಬ್ಬಂದಿವರ್ಗದರೂ ಶಾಮೀಲಾಗಿ ಕೋಟ್ಯಾಂತರ ರೂಪಾಯಿಯ ಕಲ್ಲಿದ್ದಲು ಹೋಗುತ್ತಿದೆ. ಕೇವಲ ಬೂದಿಯನ್ನು 1.5 ಕೋಟಿ ರೂಪಾಯಿಗೆ ಹರಾಜಬೇಕಾದರೆ ಆ ಬೂದಿಯಲ್ಲಿ ಎಷ್ಟು ಕಲ್ಲಿದ್ದಲು ಇರುತ್ತದೆ, ಇದರಲ್ಲಿ ಯಾವರೀತಿಯ ಅವ್ಯವಹಾರ ನಡೆದಿದೆ ಎಂಬುದನ್ನು ತಾವೇ ದಯವಿಟ್ಟು ಊಹೆಮಾಡಿಕೊಳ್ಳಬೇಕು. ಇದಕ್ಕೆ ಸರಿಯಾದ ಉತ್ತರ ಕೊಡುತ್ತಿಲ್ಲ.

ಶ್ರೀ ಎಸ್. ಬಂಗಾರಪ್ಪ : ನೀವು ಕುಳಿತುಕೊಂಡರೆ ನಾನು ಹೇಳುತ್ತೇನೆ ಇಲ್ಲಿ ಉತ್ತರವನ್ನು ಕೊಡುತ್ತಿಲ್ಲ ಎಂಬ ಪ್ರಶ್ನೆ ಇಲ್ಲ. ಕಾನೂನು ಪ್ರಕಾರ ಏನು ಪ್ರೊಸೀಜರ್ ಇದೆ, ಅದರ ಪ್ರಕಾರ ಎಲ್ಲವನ್ನೂ ಸರಿಯಾಗಿಯೇ ಮಾಡಿದ್ದಾರೆ. ಆದರೂ ಕೂಡ ತಾವು ಇದರಲ್ಲಿ ಪ್ರೊಸೀಜರ್ ಫಾಲೋ ಮಾಡಿಲ್ಲ ಎಂದು ಹೇಳಿದ್ದೀರಿ ಇದನ್ನು ನಾನು ಎನ್‌ಕ್ವೈರಿ ಮಾಡಿಸುತ್ತೇನೆ.

ಶ್ರೀ ಸಿ. ಬೈರೇಗೌಡ : ಅಲ್ಲಿ 1.5 ಕೋಟಿ ರೂಪಾಯಿಯ ಕಲ್ಲಿದ್ದಲಿನ ಬೂದಿಯನ್ನು ಹರಾಜು ಮಾಡಿದ್ದಾರೆ. ಇದು ಅಸಮರ್ಪಕ ಬಳಕೆಯಿಂದ ನಷ್ಟವಾಗುತ್ತಿದೆ. ಎಂದು ನೀವು ಉತ್ತರ ಕೊಟ್ಟಿದ್ದೀರಿ. ಆದರೆ ಸರಿಯಾಗಿ ಉತ್ತರವಲ್ಲ. ಸುಡಬೇಕಾದ ಕಲ್ಲಿದ್ದಲು ಕೂಡ ಬೂದಿಯಲ್ಲಿ ಸೇರಿಸಿ ಹೊರಗಡೆ ಕಳುಹಿಸುತ್ತಿದ್ದಾರೆ. ಈ ಸಿಂಡರ್‌ನ್ನು ತೆಗೆದುಕೊಳ್ಳುವರತಕ್ಕ ಕಂಟ್ರಾಕ್ಟರ್ ಮತ್ತು ಅಲ್ಲಿರತಕ್ಕ ಸಿಬ್ಬಂದಿವರ್ಗದವರು ಶಾಮೀಲಾಗಿ

ಈ ಕೆಲಸಮಾಡುತ್ತಿದ್ದಾರೆ. ಇದರಿಂದಾಗಿ ಕೋಟ್ಯಾಂತರ ರೂಪಾಯಿ ಬೆಲೆಯ ಕಲ್ಲಿದ್ದಲು ಹೊರಗಡೆ ಹೋಗುತ್ತಿದೆ. ಇದರ ಬಗ್ಗೆ ತಾವು ಏನು ಹೇಳುತ್ತಿದ್ದೀರಿ?

ಶ್ರೀ ಎಸ್. ಬಂಗಾರಪ್ಪ : ಲೇಮ್ ಬಗ್ಗೆ ಟೆಂಡರ್ ಇವೆ. ಕೋಲ್ ಬಗ್ಗೆ ಟೆಂಡರ್ಸ್ ಇಲ್ಲ ಎಂಬುವುದು ನನಗೆ ಗೊತ್ತಾಗುತ್ತಿದೆ.

ಶ್ರೀ ಸಿ. ಬೈರೇಗೌಡ : ನಾನು ಕೇಳಿದ್ದೇನೆ.

ಶ್ರೀ ಎಸ್. ಬಂಗಾರಪ್ಪ : ನೀವು ಕೇಳಿದ್ದೀರಿ. ಆದುದರಿಂದಲೇ ನಾನು ಉತ್ತರ ಕೊಡುತ್ತಿದ್ದೇನೆ. I am not refuting your matter.

ಕೋಲ್ ಮೂವ್‌ಮೆಂಟ್ ಏನಿದೆ ಅದು ಬೇರೆ, ಆಮೇಲೆ ಬರ್ನ್ಟ್ ಲೈಮ್ ಏನಿದೆ ಇದು ಬೇರೆ. For burnt lime tenders were called but not for coal. ಕೋಲ್‌ಗೆ ನೆಗೋಸಿಯೇಷನ್ ಎಂದು ಮಾಡಿದ್ದಾರೆ. ಆಫೀಸರ್ಸ್ ಕಮಿಟಿ ಮತ್ತೊಂದು ಎಂದು ಮಾಡಿಕೊಂಡಿದ್ದಾರೆ. I would like to know why the tenders are not called for coal movement. ನಿಮ್ಮ ಅಭಿಪ್ರಾಯವನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದುದರಿಂದಲೇ ನಾನು ಇದನ್ನು ಎನ್‌ಕ್ವೈರಿ ಮಾಡುತ್ತೇನೆಂದು ಹೇಳಿದ್ದೇನೆ. ಅದರ ವರದಿಯನ್ನು ತಮಗೆ ಕಳುಹಿಸಿಕೊಡುತ್ತೇನೆ.

ಶ್ರೀ ಸಿ. ಬೈರೇಗೌಡ : ಕಲ್ಲಿದ್ದಲು ಸಿಂಡರ್‌ನಲ್ಲಿ ಹೋಗುತ್ತಿದೆ. ಕಲ್ಲಿದ್ದಲನ್ನು ಸರಿಯಾಗಿ ಬಾಯ್ಲರ್‌ಗೆ ಫೀಡ್ ಮಾಡದೆ ಎಷ್ಟು ಶಾಖ ಅದರಿಂದ ಉತ್ಪತ್ತಿಯಾಗಬೇಕೋ ಅಷ್ಟು ಆಗುತ್ತಿಲ್ಲ ಅದು ಪೂರ್ಣವಾಗಿ ಬಳಕೆ ಆಗುತ್ತಿಲ್ಲ. ಅದು ಸಿಂಡರ್ಸ್‌ನಲ್ಲಿ ಹೋಗುತ್ತಿದೆ. ಇದರಿಂದಾಗಿ ಕೋಟ್ಯಾಂತರ ರೂಪಾಯಿ ನಷ್ಟವಾಗುತ್ತಿದೆ.

ಅಧ್ಯಕ್ಷರು : ಇದನ್ನೂ ಕೂಡ ಸೇರಿಸಿ ಎನ್‌ಕ್ವೈರಿ ಮಾಡಿಸುತ್ತೀರಾ ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ.

ಶ್ರೀ ಎಸ್.ಬಂಗಾರಪ್ಪ : ಅದನ್ನೂ ಕೂಡ ಸೇರಿಸುತ್ತೇನೆ.

12-05 ಪಿ.ಎಂ

ಶರಾವತಿ ನದಿಗೆ ಅಡ್ಡಲಾಗಿ ಸೇತುವೆಯ ನಿರ್ಮಾಣ

931 - ಶ್ರೀ ಆರ್.ಎನ್. ನಾಯಕ್ (ಭಟ್ಕಳ್) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಹೊನ್ನಾವರ ರಾಷ್ಟ್ರೀಯ ಹೆದ್ದಾರಿ ಮೇಲೆ ಶರಾವತಿ ನದಿಗೆ ನಿರ್ಮಿಸಿರುವ ಸೇತುವೆ ಎಷ್ಟು ಕಂಬಗಳಿಂದ ನಿರ್ಮಿಸಲ್ಪಟ್ಟಿದೆ.

2) ಪ್ರತಿ ಎರಡು ಕಂಬಗಳ ಮಧ್ಯೆ ನೀರು ಹರಿದು ಹೋಗಲು ಎಷ್ಟು ಅಂತರ ನೀಡಲಾಗಿದೆ?

3) ಹೊನ್ನಾವರದಿಂದ ಪ್ರಾರಂಭಿಸಿ ಎಷ್ಟರಿಂದ ಎಷ್ಟನೇ ಕಂಬಗಳ ಮಧ್ಯದಲ್ಲಿ ಈ ಸೇತುವೆ ಶಿಥಿಲಗೊಂಡಿದೆ.

4) ಶಿಥಿಲಗೊಂಡ ಭಾಗವನ್ನು ಎಷ್ಟು ಜನ ಪರಿಣಿತರು ಪರೀಕ್ಷಿಸಿದ್ದಾರೆ ಮತ್ತು ಯಾರ್ಯಾರು ಎಂದು ಪರೀಕ್ಷಿಸಿದರು?

5) ಇಂಧ ಪರಿಣಿತರಿಂದ ಪರೀಕ್ಷಿಸಲು ಈ ತನಕ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ?

6) ಪರಿಣಿತರು ನಿಖರವಾದ ಅಭಿಪ್ರಾಯ ಏನೆಂದು ಗೊತ್ತಾಗಿದೆಯೇ?

7) ಸದ್ಯ ಸೇತುವೆಯನ್ನು ನೋಡಿಕೊಳ್ಳುವ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಇವರು ಸಿವಿಲ್ ಇಂಜಿನಿಯರಿಂಗ್ ಪದವೀಧರರೆ?